# ಭಾರತ ಚುನಾವಣಾ ಆಯೋಗ

## ಮುಖ್ಯ ಚುನಾವಣಾಧಿಕಾರಿಯವರ ಕಚೇರಿ, ಕರ್ನಾಟಕ, ಬೆಂಗಳೂರು.

## ಕರ್ನಾಟಕ ವಿಧಾನ ಪರಿಷತ್ತಿನ ಕರ್ನಾಟಕ ಈಶಾನ್ಯ, ಕರ್ನಾಟಕ ನೈಋತ್ಯ ಮತ್ತು ಬೆಂಗಳೂರು ಪದವೀಧರರ ಮತಕ್ಷೇತ್ರಗಳ ಮತದಾರರ ಪಟ್ಟಿಯ ತಯಾರಿಕೆ.

### ಮತದಾರರ ನೋಂದಣಿ ನಿಯಮಗಳು 1960ರ 31(4)ನೇ ನಿಯಮದ ಮೇರೆಗೆ ಸೂಚನೆ

ಮತದಾರರ ನೋಂದಣಿ ನಿಯಮಗಳು 1960ರ 31(4)ನೇ ನಿಯಮದ ಅನುಸಾರ (1) ಕರ್ನಾಟಕ ಈಶಾನ್ಯ ಪದವೀಧರ (2) ಕರ್ನಾಟಕ ನೈಋತ್ಯ ಪದವೀಧರ ಮತ್ತು (3) ಬೆಂಗಳೂರು ಪದವೀಧರ ಕ್ಷೇತ್ರಗಳ ಮತದಾರರ ನೋಂದಣಾಧಿಕಾರಿಗಳು ದಿನಾಂಕ 28ನೇ ಸೆಪ್ಟೆಂಬರ್, 2017ರಂದು ಪ್ರಕಟಿಸಲಾದ ಸೂಚನೆಯಲ್ಲಿ ಸಂಬಂಧಿಸಿದ ಪದವೀಧರರ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಲು ಅರ್ಹರಿರುವ ಪ್ರತಿಯೊಬ್ಬ ವ್ಯಕ್ತಿಯು ಮತದಾರರ ನೋಂದಣಿ ನಿಯಮಗಳು 1960ಕ್ಕೆ ಲಗತ್ತಿಸಿರುವ ಮತ್ತು ದಿನಾಂಕ 28ನೇ ಸೆಪ್ಟೆಂಬರ್, 2017ರ (1) ದಿ ಹಿಂದೂ ಮತ್ತು (2) ಪ್ರಜಾವಾಣಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿರುವ ಎರಡನೇ ಅನುಸೂಚಿಯಲ್ಲಿ ಪುನರುದ್ಧರಿಸಿರುವ ನಮೂನೆ 18ರಲ್ಲಿ ಅರ್ಜಿಯನ್ನು 7ನೇ ನವೆಂಬರ್, 2017 ಅಥವಾ ಅದಕ್ಕೂ ಮೊದಲು ಸಂಬಂಧಪಟ್ಟ ಮತದಾರರ ನೋಂದಣಾಧಿಕಾರಿಗಳ ಕಚೇರಿಗೆ ಕಳುಹಿಸಲು ಅಥವಾ ತಲುಪಿಸಲು ಕರೆ ನೀಡಲಾಗಿತ್ತು.

ಮೇಲೆ ತಿಳಿಸಲಾದ ಎಲ್ಲಾ ವ್ಯಕ್ತಿಗಳು ತಮ್ಮ ಹೆಸರನ್ನು ಇದುವರೆವಿಗೂ ಸೇರಿಸದೇ ಇದ್ದಲ್ಲಿ ನಿಗದಿತ ನಮೂನೆ 18ರಲ್ಲಿ ದಿನಾಂಕ 7ನೇ ನವೆಂಬರ್, 2017ರೊಳಗೆ ಅಥವಾ ಅದಕ್ಕೂ ಮುಂಚೆ ಅರ್ಜಿಗಳನ್ನು ಸಲ್ಲಿಸಬಹುದು.

ಮೇಲ್ಕಂಡ ವಿವರಗಳು ಮುಖ್ಯ ಚುನಾವಣಾಧಿಕಾರಿ, ಕರ್ನಾಟಕ ಇವರ ವೆಬ್‌ಸೈಟ್ ವಿಳಾಸ **www.ceokarnataka.kar.nic.in** ರಲ್ಲಿ ಸಹ ಲಭ್ಯವಿದೆ.